# ಮುರಿಯುವೆ ಉಳ್ಳಾಗಡ್ಡಿಯ ಸೊಕ್ಕು!

ಬೇಕೇ ಬೇಕಮ್ಮ ನಂಗ
ಉಪ್ಪಿಟ್ಟಿನಲ್ಲಿ ಉಳ್ಳಾಗಡ್ಡಿ
ಬೇಕೇ ಬೇಕಮ್ಮ ನಂಗ
ಸ್ಯಾಂಡ್ವಿಚ್ಚಿನಲ್ಲಿ ಉಳ್ಳಾಗಡ್ಡಿ
ಬೇಕೇ ಬೇಕಮ್ಮ ನಂಗ
ಪಲಾವಿನಲ್ಲಿ ಉಳ್ಳಾಗಡ್ಡಿ

ಏಕೆ ಏನಾಯ್ತು ಕಣ್ಣೀರು?
ನೀ ಹೆಚ್ಚುತ್ತಿಲ್ಲ ಉಳ್ಳಾಗಡ್ಡಿ?
ಇಲ್ಲಾ ಅದೇ ನಿನ್ನನ್ನಳಿಸುತ್ತಿದೆಯೇನು?
ಹೌದು ಮಗು ಹಾಗೇ ಆಗಿದೆ
ನೂರು ರೂಪಾಯಿಗೆ ಉಳ್ಳಾಗಡ್ಡಿ
ನಾವೇನು ಕೊಂಡೇವು ಉಳ್ಳಾಗಡ್ಡಿ?
ದಡ್ಡಿಯೇ? ನಾ ಮಡ್ಡಿಯೇ?
ಕೊಳ್ಳುವೆನೇ ನಾ ಆ ಕೆಂಪುಮೋತಿಯ
ಒಣಒಣ ಜುಟ್ಟಿನ ಉಳ್ಳಾಗಡ್ಡಿ
ಕೊಳ್ಳುವುದಿಲ್ಲ ಉಳ್ಳಾಗಡ್ಡಿ.
ಯಾರು ಕೊಂಡಾರು ಆ ಉಳ್ಳಾಗಡ್ಡಿ?

ಹಿತ್ತಿಲಲ್ಲಿ ಬೆಳೆದೇನು ಉಳ್ಳಾಗಡ್ಡಿ,
ರಾಶಿ ಬೆಳೆದೇನು ಉಳ್ಳಾಗಡ್ಡಿ,
ದಿನವೂ ನಿನಗೆ ಉಪ್ಪಿಟ್ಟಿನುಳ್ಳಾಗಡ್ಡಿ
ದಿನವೂ ಸ್ಯಾಂಡ್ವಿಚ್, ಪಲಾವು,
ಹಿತ್ತಲ ತುಂಬ ಬೆಳೆಯುತ್ತ ಉಳ್ಳಾಗಡ್ಡಿ
ಮುರಿಯುವೆ ನಾನದರ ಸೊಕ್ಕನ್ನು!

■ **ಮಾಲತಿ ಪಟ್ಟಣಶೆಟ್ಟಿ**



ಚಿತ್ರ: ವಿಜಯಕುಮಾರಿ



ಚಿತ್ರ: ಮಂಜುನಾಥ ಹುಲುಕೊಪ್ಪದ

# ನನ್ನ ನೆಲ

ಜಿಂಗಿಲಕ ಜಿಂಗಿಲಕ ಜಿಂಗಿಲಾಲಾ...
ಥಕಥೈಯ ಥೈಯ ಥಕ ಕುಣಿವ ಬಾರಾ
ಹುಟ್ಟಿದೂರು ಬೆಳೆದಮನೆ ಚೆಂದ ಕಾಣಾ
ಮೆಟ್ಟಿದನೆಲ ತಾಯಿನುಡಿ ಸವಿಯೋ ಜಾಣ
ಗಿಡದ ಮೇಲೆ ಕೂತ್ತೈತೆ ಹಕ್ಕಿ ನೋಡ
ಹಣ್ಣು ತಿಂದು ಹಾರುತ್ತೈತೆ ಚೆಂದ ನೋಡ
ನಮ್ಮೂರಾಗೆ ಇರೋದು ಸರ್ಕಾರಿ ಶಾಲಾ
ಎಂಥ ಚೆಂದ ಕಲಿಸ್ತಾರಾ ನೋಡು ಬಾರಾ
ಪುಸ್ತಕ, ಬಟ್ಟೆ, ಹಾಲು, ಅನ್ನ ಉಚಿತವಣ್ಣ
ಮಸ್ತಕಜ್ಞಾನ, ಆಟ, ಹೊರನೋಟ ಲಭ್ಯವಣ್ಣ
ನನ್ನಶಾಲೆ ನನ್ನಗುರುಗಳು ಇಷ್ಟ ಕಾಣಾ
ಪಾಠ ಕಲಿಸಿ ಬುದ್ಧಿಹೇಳೊ ತಾಣ ಕಾಣಾ
ನನ್ನ ದೇಶ ನನ್ನ ಜನ ದೇವ್ರೊ ಜಾಣ
ಅವ್ರಿಗಾಗಿ ಮಾನ, ಹರಣ ಮುಡಿಪೊ ಅಣ್ಣ
ಇಲ್ಲೆ ಬದುಕು ಇಲ್ಲೆ ಸೇವೆ ಮೀಸಲಣ್ಣ
ಹೊರದೇಶದ ಸುಖ ಸೌಲತ್ತು ಸೊನ್ನೆ ಕಾಣಾ

■ **ಎಂ.ಡಿ.ಚಂದ್ರೇಗೌಡನಾರಮ್ನಳ್ಳಿ**